ಉಪಾಧ್ಯಕ್ಷರು :- ಶ್ರೀ ಬಾಬೂರಾವ್ ಚಿಂಚನಸೂರ್ ಅವರ ಗಮನ ಸೆಳೆವ ಸೂಚನೆಗೆ ಬೇರೆ ಮಂತ್ರಿಗಳು ಸ್ಟೇಟ್‌ಮೆಂಟ್ ಮಾಡಬೇಕಾಗಿರುವುದರಿಂದ ಅದನ್ನು ಮುಂದೆ ಹಾಕಿದ್ದೇನೆ.

ಕುಷ್ಟಗಿ ನಗರದಲ್ಲಿರುವ ಬಾಲಕಿಯರ ಹಾಸ್ಟೆಲ್ ಕಟ್ಟಡ ಕಳೆದ 3-4 ವರ್ಷಗಳಿಂದ ಶಿಥಿಲಾವಸ್ಥೆಯಲ್ಲಿರುವುದು.

ಶ್ರೀ ಹನುಮನಗೌಡ ಪಾಟೀಲ್ :- ಮಾನ್ಯ ಅಧ್ಯಕ್ಷೀಣೆಯವರೇ, ಕುಷ್ಟಗಿ ನಗರದಲ್ಲಿರುವ ಬಾಲಕಿಯರ ಹಾಸ್ಟೆಲ್ ಕಟ್ಟಡವು ಕಳೆದ 3-4 ವರ್ಷಗಳಿಂದ ಶಿಥಿಲಾವಸ್ಥೆಯಲ್ಲಿರುವ ಬಗ್ಗೆ ಮಾನ್ಯ ಸಮಾಜ ಕಲ್ಯಾಣ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಿ. ಶಿವಣ್ಣ :- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಎತ್ತಿರತಕ್ಕ ವಿಚಾರದ ಬಗ್ಗೆ ನಾನು ಈ ಕೆಳಕಂಡ ಸ್ಟೇಟ್‌ಮೆಂಟ್ ಮಾಡುತ್ತೇನೆ.

ರಾಯಚೂರು ಜಿಲ್ಲೆ, ಕುಷ್ಟಗಿ ಪಟ್ಟಣದಲ್ಲಿ ಸರ್ಕಾರದಿಂದ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡಗಳ ಬಾಲಕಿಯರ ಹಾಸ್ಟೆಲ್ ಕಟ್ಟಲು 1983-84ರ ಜಿಲ್ಲಾವಲಯ ಯೋಜನೆಯಲ್ಲಿ 2.87 ಲಕ್ಷ ರೂ.ಗಳನ್ನು ಒದಗಿಸಲಾಗಿತ್ತು. ಸದರಿ ಕಟ್ಟಡವನ್ನು ಕಟ್ಟಲು ಕುಷ್ಟಗಿ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳಿಗೆ ವಹಿಸಲಾಗಿತ್ತು. ಕುಷ್ಟಗಿ ನಗರದ ಸಾರ್ವಜನಿಕರು ಕಳಪೆ ಕಟ್ಟಡ ಕಟ್ಟಿದ್ದರ ಬಗ್ಗೆ ಹಾಗೂ ಕಟ್ಟಡ ಬಿದ್ದು ಹೋಗಿರುವುದರ ಬಗ್ಗೆ ದೂರು ನೀಡಿದ್ದರ ಮೇರೆಗೆ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕಾರ್ಯದರ್ಶಿಯವರು ಕ್ಷೇತ್ರಾಭಿವೃದ್ಧಿ ಅಧಿಕಾರಿ ಹಾಗೂ ಜೂನಿಯರ್ ಇಂಜಿನಿಯರ್ ವಿರುದ್ಧ ತನಿಖೆ ನಡೆಸಿರುತ್ತಾರೆ. ಇದುವರೆವಿಗೂ ಈ ಕಟ್ಟಡಕ್ಕೆ 1.33 ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದೆ. ಸದರಿ ವಸತಿನಿಲಯದ ಕಟ್ಟಡದ ಕೆಲಸ ನಿರ್ವಹಿಸಿದ್ದ ಕಂಟ್ರಾಕ್ಟ್‌ದಾರರು ಕುಷ್ಟಗಿ ಮುನ್ಸಿಫ್ ನ್ಯಾಯಾಲಯದಲ್ಲಿ ಕೇಸು ದಾಖಲು ಮಾಡಿದ್ದಾರೆ. ಈ ಕೇಸು ನ್ಯಾಯಾಲಯದಲ್ಲಿ ಬಾಕಿ ಇದೆ. ಕಂಟ್ರಾಕ್ಟ್‌ದಾರರು ಕೆಲಸವನ್ನು ನಿಲ್ಲಿಸಿದ್ದಾರೆ. ಮುನ್ಸಿಫ್ ನ್ಯಾಯಾಲಯದಲ್ಲಿ ಕೇಸು ತೀರ್ಮಾನವಾದ ನಂತರ, ಕುಷ್ಟಗಿಪಟ್ಟಣದಲ್ಲಿ ಬಾಲಕಿಯರ ಹಾಸ್ಟೆಲ್ ಕಟ್ಟಡವನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಶ್ರೀ ಹನುಮನಗೌಡ ಪಾಟೀಲ್ :- ಮಾನ್ಯ ಉಪಾಧ್ಯಕ್ಷೀಣೆಯವರೆ, 1984-85 ರಲ್ಲಿ ಈ ಹಾಸ್ಟಲ್ ಕಟ್ಟಡ ಪ್ರಾರಂಭವಾಗಿದೆ. ಅದು ಪರಿಶಿಷ್ಟ ಜಾತಿಯವರ ವಿದ್ಯಾರ್ಥಿನಿಲಯ. ಅದು ಎಂಟು ವರ್ಷಗಳಿಂದ ಮುನ್ಸೀಫ್ ನ್ಯಾಯಾಲಯದಲ್ಲಿ ಕೇಸ್ ಪೆಂಡಿಂಗ್ ನಲ್ಲಿದೆಯೆಂದು ಹೇಳಿದ್ದಾರೆ. ಇದನ್ನು ನೋಡಿದರೆ ಇದರ ಬಗ್ಗೆ ಸರ್ಕಾರ ಆಸ್ಥೆ ವಹಿಸಿಲ್ಲವೆಂದು ಆಗುತ್ತದೆ. ಎಂಟು ವರ್ಷಗಳಿಂದ ಕಟ್ಟಡವನ್ನು ಕಟ್ಟದಿರುವುದರಿಂದ ಅದರ ಅಂದಾಜು ವೆಚ್ಚ ಈಗ ಡಬ್ಬಲ್ ಆಗುತ್ತದೆ. ಈಗ ಅದೊಂದು ಸ್ಮಾರಕವಾಗುತ್ತಿದೆ. ನಮ್ಮ ಜಿಲ್ಲೆಯವರೇ ಸಮಾಜ ಕಲ್ಯಾಣ ಸಚಿವರು ಅದು ಮಾನ್ಯ ಮಂತ್ರಿಗಳಾದ ಶಿವಣ್ಣನವರ ಸ್ಮಾರಕ ಎನ್ನುವ ಪ್ರಸಂಗ ಬಂದೀತು. ಆ ಕಡೆಗೆ ಸಮಾಜ ಕಲ್ಯಾಣ ಸಚಿವರು ಅದರಲ್ಲೂ ಜಿಲ್ಲೆಯವರು ಕುಷ್ಟಗಿ ನಗರದಲ್ಲಿರುವ ಬಾಲಕಿಯರ ಹಾಸ್ಟೆಲ್ ಕಟ್ಟಡವನ್ನು ಕಟ್ಟಿ ಬೇಗ ಪ್ರಾರಂಭ ಮಾಡಿದರೆ ನಮ್ಮ ತಾಲ್ಲೂಕಿನ ಜನತೆ ಹೃತ್ಪೂರ್ವಕವಾದ ಧನ್ಯವಾದಗಳನ್ನು ಅರ್ಪಿಸುತ್ತದೆ. ದಯವಿಟ್ಟು ಅದರ ಬಗ್ಗೆ ಸ್ಪಷ್ಟವಾದ ಉತ್ತರವನ್ನು ಮಾನ್ಯ ಮಂತ್ರಿಗಳು ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಶಿವಣ್ಣ :- ಮಾನ್ಯ ಉಪಾಧ್ಯಕ್ಷೀಣೆಯವರೆ, ಇದರ ಬಗ್ಗೆ ಒಂದು ಕೇಸು ಮುನ್ಸೀಫ್ ನ್ಯಾಯಾಲಯದಲ್ಲಿದ್ದ ಕಾರಣ ಏನೂ ಮಾಡಲಿಕ್ಕೆ ಆಗಿಲ್ಲ. ನಮ್ಮ ಅಧಿಕಾರಿಗಳಿಗೆ ಹೇಳಿ ಆ ಕೇಸು ಏನಾಗಿದೆಯೆಂದು ನೋಡಿಸುತ್ತೇನೆ. ಅಷ್ಟೇ ಅಲ್ಲದೆ ಉಳಿದ ಹಾಸ್ಟಲ್ ಬಿಲ್ಡಿಂಗ್ ಏನು ಕಟ್ಟಿಸಬೇಕು ಅದನ್ನು ಕೇಸು ತೀರ್ಮಾನವಾದ ನಂತರ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.